# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ಅನೇಕ ದಿನಗಳಿಂದ ಅರ್ಧಕ್ಕೆ ನಿಂತಿರುವ ಕೆಲಸಗಳು ಮುಂದುವರೆಯುತ್ತವೆ. ವಾಹನ ಸೌಖ್ಯ. ವ್ಯಾಪಾರ ವ್ಯವಹಾರದಲ್ಲಿ ಉತ್ತಮ ಲಾಭ ಕಂಡುಬರುವುದು. ಭೂ ವ್ಯವಹಾರಗಳಿಂದ ಅನುಕೂಲವಾಗಲಿದೆ. ಆರೋಗ್ಯದಲ್ಲಿ ಏರುಪೇರು ಕಂಡುಬರಬಹುದು, ಸೂಕ್ತ ಎಚ್ಚರಿಕೆವಹಿಸಿ. ಶುಭ: 12, 20, 24 ಅಶುಭ: 11, 22, 26.



**ವೃಷಭ:** ವಿಶೇಷ ಗೃಹ ಅಲಂಕಾರ ವಸ್ತುಗಳನ್ನು ಖರೀದಿಸುವಿರಿ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಕಂಡುಬರಲಿದೆ. ಯಂತ್ರ ಮತ್ತು ವಾಹನಗಳಿಂದ ಸಮಸ್ಯೆ ಎದುರಾಗಬಹುದು. ಬಂಧುಬಳಗದಲ್ಲಿ ವೈಮನಸ್ಸು ಮೂಡಬಹುದು. ಕುಟುಂಬದೊಂದಿಗೆ ಚಿಕ್ಕ ಪ್ರವಾಸ ಸಾಧ್ಯತೆ. ಶುಭ: 10, 16, 24 ಅಶುಭ: 9, 13, 23.



**ಮಿಥುನ:** ಕೌಟುಂಬಿಕ ಸಮಸ್ಯೆಗಳು ಬಗೆಹರಿಯುವವು. ಕೈ ಕಾಲುಗಳಲ್ಲಿ ನರದ ಸೆಳೆತ, ನೋವು ಕಾಣಿಸಿಕೊಳ್ಳಬಹುದು. ವ್ಯಾಪಾರದಲ್ಲಿ ನಷ್ಟ ಸಂಭವ, ಅನಗತ್ಯ ಕಳವಳ. ಕೋರ್ಟ್ ವ್ಯವಹಾರಗಳಲ್ಲಿ ಜಯ. ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದ ಇರುವುದು ಉತ್ತಮ. ಶುಭ: 11, 17, 22 ಅಶುಭ: 15, 18, 25.



**ಕರ್ಕ:** ಆರೋಗ್ಯ ಸುಧಾರಿಸುವುದು. ವಿವಿಧ ಕಾರಣಗಳಿಗಾಗಿ ಆಕಸ್ಮಿಕ ಖರ್ಚು ಸಂಭವ. ಆಸ್ತಿ ಖರೀದಿ ಬಗ್ಗೆ ಚಿಂತನೆ ನಡೆಸುವಿರಿ. ಕಲಾವಿದರಿಗೆ, ಸಾಹಿತಿಗಳಿಗೆ ಉತ್ತಮ ಸಮಯ. ರಾಜಕೀಯ ಧುರೀಣರಿಗೆ ಅಧಿಕಾರ ಪ್ರಾಪ್ತಿ. ಸಂಘ ಸಂಸ್ಥೆಗಳಿಂದ ಧನಲಾಭ. ಶುಭ: 14, 19, 26 ಅಶುಭ: 12, 22, 27.



**ಸಿಂಹ:** ದಾನ ಧರ್ಮಕ್ಕಾಗಿ ಖರ್ಚು ಮಾಡುವಿರಿ. ಮಿತ್ರರು ನಿಮ್ಮಿಂದ ಸಹಾಯ ಬಯಸಿ ಬರುವರು. ಹಲವು ದಿನಗಳಿಂದ ಮನೆಮಾಡಿದ್ದ ಆಲಸ್ಯ ದೂರವಾಗುವುದು. ಮನೆಯಲ್ಲಿ ಸಂಭ್ರಮ, ಬಂಧು–ಮಿತ್ರರ ಆಗಮನದಿಂದ ಸಂತಸ. ಭೂಮಿ ಕ್ರಯ ವಿಕ್ರಯ ಯೋಗ. ಶುಭ: 10, 14, 19 ಅಶುಭ: 11, 18, 22.



**ಕನ್ಯಾ:** ಆಕಸ್ಮಿಕ ಖರ್ಚು, ದೈಹಿಕ ಬಾಧೆ, ಅಪವಾದ ಭಯ, ಅಧಿಕಾರಿಗಳ ಕೆಂಗಣ್ಣು ಅನೇಕ ವಿಚಾರಗಳು ಮನಸ್ಸಿಗೆ ಅಸಮಾಧಾನವನ್ನುಂಟು ಮಾಡಬಹುದು. ಆದರೆ ವ್ಯಾಪಾರದಲ್ಲಿ ಅಧಿಕ ಲಾಭ. ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ. ಸಹೋದರರಿಂದ ಸಹಾಯ. ಶುಭ: 14, 18, 28 ಅಶುಭ: 15,20,27.



**ತುಲಾ:** ವೃತ್ತಿ ವ್ಯವಹಾರದಲ್ಲಿ ಉತ್ತಮ ಲಾಭ, ಅನುಕೂಲತೆ. ಸರ್ಕಾರಿ ಕೆಲಸಗಳು ಶೀಘ್ರವಾಗಿ ಪೂರ್ಣಗೊಳ್ಳುವವು. ತಂದೆ ತಾಯಿಯ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು. ಸಾಮಾಜಿಕ ಮಾನ ಸನ್ಮಾನ ದೊರೆಯುತ್ತದೆ. ಕಲಾವಿದರಿಗೆ ಸಂಗೀತಗಾರರಿಗೆ ಉತ್ತಮ ಸಮಯ. ಶುಭ:13, 18, 22 ಅಶುಭ: 12, 20, 24.



**ವೃಶ್ಚಿಕ:** ನಿರೀಕ್ಷಿತ ಅಧಿಕಾರ ಲಾಭ. ಅಧಿಕಾರಿಗಳಿಗೆ ಪದೋನ್ನತಿ ಸಿಗುವುದು. ಬರತಕ್ಕ ಬಾಕಿ ಹಣ ಕೈಸೇರುವುದು. ಕೌಟುಂಬಿಕ ಖರ್ಚು ಹೆಚ್ಚುವುದು. ಕಣ್ಣಿನ ತೊಂದರೆ ಕಾಣಿಸಬಹುದು. ಪುಣ್ಯಕ್ಷೇತ್ರ ದರ್ಶನ. ವಿವಾಹಾಕಾಂಕ್ಷಿ ಯುವಕ ಯುವತಿಯರಿಗೆ ಕಂಕಣಭಾಗ್ಯ ದೊರೆಯುವುದು. ಶುಭ: 09, 16, 22 ಅಶುಭ: 05, 11, 27.




**ಧನು:** ತೂಗುಕತ್ತಿಯ ಭಯ ದೂರಾಗುವುದು, ಆದರೂ ವಿರೋಧಿಗಳ ಬಗ್ಗೆ ಎಚ್ಚರಿಕೆ ಇರಲಿ. ಮಕ್ಕಳ ವಿದೇಶ ಪ್ರವಾಸಕ್ಕೆ ಸಿದ್ಧತೆ ನಡೆಸುವಿರಿ. ಅಕಸ್ಮಾತ್ ಧನಲಾಭ. ನದಿ–ಸಮುದ್ರ ತೀರಗಳಲ್ಲಿ ಪ್ರಯಾಣಿಸುವಾಗ ಎಚ್ಚರಿಕೆಯಿಂದಿರಿ. ಮಾನ ಸನ್ಮಾನ ಯೋಗ. ಶುಭ: 11, 14, 19 ಅಶುಭ: 16, 22, 29



**ಮಕರ:** ಪೋಷಕರಿಗೆ ಅನಾರೋಗ್ಯ ಕಾಡಬಹುದು, ಸೂಕ್ತ ಸಮಯದಲ್ಲಿ ಚಿಕಿತ್ಸೆ ಕೊಡಿಸಿ. ವಾಹನ ಚಲಾಯಿಸುವಾಗ ಎಚ್ಚರಿಕೆಯಿಂದಿರಿ. ಮಿತ್ರರಿಂದ ಅಪವಾದ ನಿಂದನೆ ಸಾಧ್ಯತೆ. ವ್ಯಾಪಾರಸ್ಥರಿಗೆ ಲಾಭ. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು. ಶುಭ: 11, 15, 21 ಅಶುಭ: 10, 19, 24.



**ಕುಂಭ:** ಸರ್ಕಾರಿ ಉದ್ಯೋಗಿಗಳಿಗೆ ವರ್ಗಾವಣೆ. ಪತ್ನಿಗೆ ಅನಾರೋಗ್ಯ. ಮನೆ ಬದಲಾವಣೆಗೆ ಸುಸಮಯ. ಸ್ಪರ್ಧೆಯಲ್ಲಿ ಅಪಜಯ. ಕೆಂಪುಬಣ್ಣದ ಯಂತ್ರಗಳಿಂದ ಲಾಭ. ತಿಂಗಳಾಂತ್ಯದಲ್ಲಿ ಧನಲಾಭ. ಆರೋಗ್ಯ ಸ್ಥಿರ. ಶುಭ: 12, 14, 22 ಅಶುಭ:10, 15, 26.



**ಮೀನ:** ಕೌಟುಂಬಿಕ ವಿರಸ. ಪ್ರಯತ್ನ ಪೂರ್ವಕ ಬರತಕ್ಕ ಬಾಕಿ ಹಣ ಬರುವುದು. ಮಕ್ಕಳಿಂದ ಸುವಾರ್ತೆ. ಶೇರು ವ್ಯವಹಾರಗಳಲ್ಲಿ ಉತ್ತಮ ಲಾಭ. ದೀರ್ಘಕಾಲದ ಖಾಯಿಲೆಯಿಂದ ಬಳಲುತ್ತಿರುವವರಿಗೆ ಸೂಕ್ತ ಚಿಕಿತ್ಸೆ. ಕ್ರೀಡಾಪಟುಗಳಿಗೆ ಯಶಸ್ಸು. ಶುಭ: 11, 21, 28 ಅಶುಭ: 18, 26, 29